ಓ.ಎಸ್ ನಂಃ 315/2021

ಪಿ .ಡಬ್ಲು-2

ಸಾಕ್ಷಿಯನ್ನು ದಿನಾಂಕಃ 09.07.2026 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.

**ಪಾಟೀ ಸವಾಲು ಃ- ಪ್ರತಿವಾದಿ ಪರ ಶ್ರೀ. ಎಂ ಎಲ್ ವಿ ವಕೀಲರಿಂದ**

ನನ್ನ ಜಮೀನಿನ ಸರ್ವೆ ನಂಬರ್ ನನಗೆ ಗೊತ್ತಿಲ್ಲ. ನಾನು 4 ನೇ ವಾದಿಯ ಪರವಾಗಿ ಸಾಕ್ಷ್ಯ ನುಡಿಯಲು ಬಂದಿರುತ್ತೇನೆ. ವಾದಿಯರು ಈ ದಾವೆಯನ್ನು ಸರ್ವೆ ನಂ 28/5 ರ ಲ್ಲಿ 29 ಗುಂಟೆ ಸಂಬಂದ ಹಾಕಿರುತ್ತಾರೆ. ದಾವಾ ಅಸ್ತಿಯ ಚೆಕ್ಕುಬಂದಿ ದಕ್ಷಿಣಕ್ಕೆ ಗೋವಿಂದರೆಡ್ಡಿ ರವರ ಜಮೀನು , ಅದರ ಸರ್ವೆ ನಂಬರ್ ಹಾಗೂ ಚೆಕ್ಕು ಬಂದಿ ಗೊತ್ತಿಲ್ಲ, ಉತ್ತರಕ್ಕೆ ಕೃಷ್ಣಾರೆಡ್ಡಿ ರವರು ಜಮೀನು ,ಅದರ ಸರ್ವೆ ನಂಬರ್ ಹಾಗೂ ಚೆಕ್ಕು ಬಂದಿ ಗೊತ್ತಿಲ್ಲ. ನಾನು ಮತ್ತು 4 ನೇ ವಾದಿಯು ಒಂದೇ ಜಾತಿಯವರು ಹಾಗೂ ಸಂಬಂದಿಯಾಗಬೇಕು. ಅಮರನಾರಾಯಣ ರೆಡ್ಡಿ ಮೃತಪಟ್ಟು ಅಂದಾಜು 10 ವರುಷಗಳಾಗಿರುತ್ತದೆ. ಅವರು ಜೀವಂತವಾಗಿರುವಾಗ ಯಾರ ಜೊತೆ ಇದ್ದರು ಎಂದರೆ ಕುಡಿಯುವವರ ಜೊತೆ ಇದ್ದರು. 4 ನೇ ವಾದಿಯು ಈ ಹಿಂದೆ ದಾವಾ ಅಸ್ತಿಯ ಸಂಬಂದ ಮಾತ್ರ ದಾವಾ ಹಾಕಿದ್ದು ಬೇರೆ ಅಸ್ತಿಗಳ ಸಂಬಂದ ಹಾಕಿರಲಿಲ್ಲ. ಪ್ರತಿವಾದಿ ನಮ್ಮ ಊರಿನವರು ಎಂದರೆ ಸರಿ . 1995 ರಲ್ಲಿ ಪ್ರತಿವಾದಿಯು ಅಮರನಾರಾಯಣ ರೆಡ್ಡಿ ರವರಿಂದ ಶುದ್ಧ ಕ್ರಯ ಪತ್ರ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ ಕರಾರು ಪತ್ರ ಮಾಡಿಕೊಂಡಿರುತ್ತಾರೆ. ಸದರಿ ಕರಾರು ಪತ್ರಕ್ಕೆ ಸಹಿ ಹಾಕಿರುತ್ತೀರಾ ಎಂದರೆ ಇಲ್ಲ. ಸದರಿ ಕರಾರು ಪತ್ರ ಯಾವಾಗ ಅಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ.

1995 ರಿಂದ ಇಲ್ಲಿಯವರೆಗೂ ಪ್ರತಿವಾದಿಯನ್ನು ಹೊರತುಪಡಿಸಿ ಬೇರೆ ಯಾರು ದಾವಾ ಅಸ್ತಿಯಲ್ಲಿ ಸ್ವಾಧೀನ ಇಲ್ಲ ಎಂದರೆ ಸರಿಯಲ್ಲ, 4 ನೇ ಪ್ರತಿವಾದಿ ಸ್ವಾಧೀನ ಇರುತ್ತಾರೆ. ಕ್ರಯ ಪತ್ರವಾದಾಗಿನಿಂದಲೂ ಪಹಣಿ ಹಾಗೂ ಮ್ಯುಟೇಷನ್ ಪ್ರತಿವಾದಿಯ ಹಸರಿನಲ್ಲಿ ಇರುತ್ತದೆ ಹಾಗೂ ಅವರೇ ಕಂದಾಯ ಕಟ್ಟುತ್ತಿದ್ದಾರೆ ಎಂದರೆ ಗೊತ್ತಿಲ್ಲ. ದಾವಾ ಅಸ್ತಿಯಲ್ಲಿ ವಾದಿಗಳು ಸ್ವಾಧೀನದಲ್ಲಿ ಇಲ್ಲದಿದ್ದರೂ ಅವರ ಮಾತು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ- ಇಲ್ಲ.**

***(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತಗೊಳಿಸಲಾಗಿದೆ)***

**ಓದಿ ಹೇಳಿ ಕೇಳಿ ಸರಿ ಇದೆ,**

**ಸಹಿ/-**

***(ಹರೀಶ್. ಜಿ )***

***ಪ್ರಧಾನ ಸಿವಿಲ್ ನ್ಯಾಯಾಧೀಶರು,***

**ಮತ್ತು ಜೆಎಂಎಫ್ ಸಿ, ಮುಳಬಾಗಿಲು**